# ನಿಶ್ಚಿತಾರ್ಥಕ್ಕೆ ಬರಲೊಪ್ಪಿದ ಅಪ್ಪ

ತನ್ನೆದುರು ನಿಂತು ತನ್ನಮ್ಮನನ್ನು ಹೀಗಳೆಯುತ್ತಿದ್ದಾನೆ ಮನುಷ್ಯ. ಅಮ್ಮ ಎಂತವಳೇ ಇರಲಿ, ತನ್ನ ಅಮ್ಮ. ಇಷ್ಟು ವರ್ಷ ಹೊಟ್ಟೆ ಬಟ್ಟೆ ನೋಡಿಕೊಂಡು ಮುಚ್ಚಟೆಯಿಂದ ಸಾಕಿ ಬೆಳೆಸಿದ್ದಾಳೆ. ಹೊಟ್ಟೆಯೊಳಗಿಂದ ಭುಗಿಲೇಳುತ್ತಿದೆ ಅಸಹನೆ. ಬೇರೆ ಸಂದರ್ಭದಲ್ಲಾಗಿದ್ದರೆ, 'ಹೋಗ್ ಹೋಗೋ, ನೀನು ಅಪ್ಪಂತೋನಾಗಿದ್ರೆ ನನ್ನಮ್ಮ ನಿನ್ನನ್ಯಾಕೆ ಬಿಟ್ಟು ಹೊಡೀತಿದ್ಲು?' ಎಂದು ಪದ್ಮನಾಭ ಕೇಳುತ್ತಿದ್ದನೇನೋ. ಸಿಟ್ಟು ಎನ್ನುವುದು ಮೂಗಿನ ತುದಿಯಲ್ಲಿ ಕುಣಿಕುಣಿದಾಡುತ್ತಿರುವ ಈ ವಯಸ್ಸಿನಲ್ಲಿ ಆ ಧಾರ್ಷ್ಟ್ಯ ತನ್ನಷ್ಟಕ್ಕೆ ಬಂದರೆ ಅಚ್ಚರಿಯೇನಿರಲಿಲ್ಲ. ಆದರೆ ಈಗ? ನಾಲಿಗೆಗೆ ಲಗಾಮು

